ದಿನಾಂಕಃ 25.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ.ವಿ.ಎಸ್. ಅವರಿಂದ–

14. ನಾನು, ಮೊಗಣ್ಣೇಗೌಡ, ಹೇಮಾವತಿ ಹಾಗೂ ರಮಾದೇವಿ ಒಬ್ಬರಿಗೊಬ್ಬರು ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ನಮ್ಮ 4 ಜನರಿಗೆ ಇರುವ ಅನ್ಯೂನ್ಯತೆ ಪ್ರತಿವಾದಿಯ ಜೊತೆ ಇಲ್ಲ ಎಂದರೆ ಸರಿ.

15. ನನ್ನ ತಂದೆ 2005 ರಲ್ಲಿ, ತಾಯಿ 2016 ರಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ 2005 ರಲ್ಲಿ ತೀರಿಹೋಗಿರುತ್ತಾರೆ ಎಂದು ತೋರಿಸಲು ದಾಖಲಾತಿಗಳು ಇವೆ. ಈ ಬಗ್ಗೆ ನಾನು ಮರಣ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಈ ಹಂತದಲ್ಲಿ ಸಾಕ್ಷಿದಾರರಿಗೆ ತಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಕೈಗೆ ಕೊಟ್ಟು ನಿಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ತೋರಿಸಿ ಎಂದು ಕೇಳಿದ್ದಕ್ಕೆ, ಸಾಕ್ಷಿದಾರರು ನಿಪಿ.32 ಅನ್ನು ತೋರಿಸಿ ಇದು ನನ್ನ ತಂದೆಯ ಮರಣ ಪ್ರಮಾಣ ಪತ್ರ ಎಂದು ಸಾಕ್ಷಿ ನುಡಿಯುತ್ತಾರೆ.

16. ನನ್ನ ತಂದೆ ದಿಃ13.08.2004 ರಲ್ಲಿ ತೀರಿಹೋಗಿರುತ್ತಾರೆ ಎಂದರೆ ಸರಿ. ನನ್ನ ಮದುವೆ 1997 ರಲ್ಲಿ ಆಗಿರುತ್ತದೆ. ನನ್ನ ಮದುವೆಯನ್ನು ಮಾಡಲು 1 ನೇ ಪ್ರತಿವಾದಿ ಜಾವಾಬ್ದಾರಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ.

17. ನಾನು ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಸಲ್ಲಿಸಿರುವ ಅಂಶಗಳನ್ನು ತಿಳಿದುಕೊಂಡಿಲ್ಲ ಎಂದು ಕಳೆದ ಪಾಟೀಸವಾಲಿನಲ್ಲಿ ಹೇಳಿದ್ದು, ಈ ಬಾರಿ ತಿಳಿದುಕೊಂಡು ಬಂದಿದ್ದೇನೆ. ಪ್ರತಿವಾದ ಪತ್ರದ ಪ್ಯಾರಾ ನಂಬರ್.11 ರಲ್ಲಿ ಯಾರ್ಯಾರನ್ನು ಅಗತ್ಯ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಹೇಳಿರುವ ಬಗ್ಗೆ ತಿಳಿದುಕೊಂಡು, ದಾಸೇಗೌಡ ಅವರ ವಂಶಸ್ಥರರನ್ನು ಸೇರಿಸುವ ಪ್ರಯತ್ನ ಮಾಡಿದ್ದೀರಾ ಎಂಬ ಪ್ರಶ್ನೆಗೆ ದಾಸೇಗೌಡ ಹಾಗೂ ಅಕ್ಕಯ್ಯಮ್ಮ ಈಗ ತೀರಿಹೋಗಿದ್ದಾರೆ. ಈಗ ಯಾರು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಾಸೇಗೌಡ ಅವರ ವಂಶಸ್ಥರು ಯಾರು ಇಲ್ಲ ಎಂದು ಹೇಳಲು ಸರಕಾರದಿಂದ ಆ ರೀತಿ

ದಾಖಲಾತಿ ಪಡೆದು ಸಲ್ಲಿಸಬೇಕು ಎಂದರೆ ಕೊಡೋಣ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಾಖಲಾತಿ ಈವರೆಗೆ ನಾನು ಕೊಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ.

18. 1 ನೇ ವಾದಿ ಮೊಗಣ್ಣೇಗೌಡ ಅವರು ಸಕ್ರೆಟರಿ ಆಗಿದ್ದರು, ಅವರನ್ನು ಆ ಸ್ಥಾನದಿಂದ ಸಂಘದವರು ಕಿತ್ತುಹಾಕಿದ್ದರು ಎಂದರೆ ಸರಿ. ಆ ರೀತಿ ತೆಗೆದುಹಾಕಲು ಅವರು ಸಾಕಷ್ಟು ಅಕ್ರಮ ಅವ್ಯವಹಾರ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ವಾದಿ ಮೊಗಣ್ಣೇಗೌಡ ಅವರು ಮಾಡಿದ್ದ ಅವ್ಯವಹಾರವನ್ನು ಮನೆತನದ ಮಾರ್ಯಾದೆ ಉಳಿಸಿಕೊಳ್ಳಲು 1 ನೇ ಪ್ರತಿವಾದಿ ಜಾವಾಬ್ದಾರಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ.

19. ನಾನು ನನ್ನ ಕಡೆಯಿಂದ ಸಾಕ್ಷಿ ಪಟ್ಟಿ ಸಲ್ಲಿಸಿ ಬೇರೆಯವರನ್ನು ಸಾಕ್ಷಿ ಮಾಡಿಸುತ್ತೇನೆ. ನನ್ನ ಅಣ್ಣ ಅಂದರೆ 1 ನೇ ವಾದಿ ಮೊಗಣ್ಣೇಗೌಡ ಅವರ ಸಾಕ್ಷಿ ವಿಚಾರಣೆ ಮಾಡುತ್ತೇನೆ.

**ಈ ಹಂತದಲ್ಲಿ ಸಿ.ವಿ.ಎಸ್ ವಕೀಲರು ಸಾಕ್ಷಿದಾರರು ಮುಖ್ಯವಿಚಾರಣೆ ಮಾಡಿ ಉಳಿದ ಸಾಕ್ಷಿವಿಚಾರಣೆ ಮಾಡಿದ ನಂತರ ಪಾಟೀಸವಾಲು ಮಾಡುವುದಾಗಿ ಕಾಲಾವಕಾಶ ಕೋರಿದ್ದರಿಂದ, ಪಾಟೀಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.